ಅಸಮಾಧಾನಗೊಂಡಿದ್ದಳು ಸಾವಕ್ಕ. ಆ ಇಬ್ಬರೂ ಆಳುಗಳು ನಗುತ್ತ, "ನಿನ್ನಂಗs ಅವರಿಗೂ ಕೆರಿ ಅಂಗಳಕ್ಕ್ ಹೋಗ ಅಂತೀ ಏನಬೇ" ಎಂದು ಗೊಳ್ಳೆಂದು ನಗುತ್ತ ನೆಲ ಅಗೆಯತೊಡಗಿದ್ದರು.

ಮಂತ್ರಿಗಳು ಬರುವ ದಿನ ಹತ್ತಿರಗೊಳ್ಳುತ್ತಿದ್ದಂತೆಯೇ ಸಾವಕ್ಕನಿಗೆ ದಿಗಿಲಾಗತೊಡಗಿತು. ಹಿತ್ತಲಲ್ಲಿ ಮಿರ ಮಿರನೆ ಮಿಂಚುವ ಕಮೋಡ್ ಹೊಂದಿದ ಪಾಯಖಾನೆ ತಯಾರಾದರೂ ತನ್ನ ಮುರುಕು ಮನೆಗೆ ಒಂದು ಬಟ್ಟು ಸುಣ್ಣವನ್ನೂ ಬಳಿದಿರಲಿಲ್ಲ. ಮುಪ್ಪಾಗಿರುವ ಈ ಮನೆಯನ್ನ ದುರಸ್ತಿ ಮಾಡಿದರೆಷ್ಟು ಬಿಟ್ಟರೆಷ್ಟು ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡಳು. ಏನಾದರಾಗಲಿ ಎಂದು ಮನೆಯ ದೂಳನ್ನು ಕೊಡವಿ ನೆಲವನ್ನು ಸಾರಣೆ ಮಾಡಿದಳು. ಇದ್ದ ನಾಲ್ಕು ಹಾಸಿಗೆಗಳನ್ನು ಕೆರೆಗೊಯ್ದು ಹಸನುಗೊಳಿಸಿದಳು. ಮಂತ್ರಿಗಳ ಊಟಕ್ಕೆಂದು ಕಾಳು ಕಡಿಗಳನ್ನು ಒಪ್ಪ ಮಾಡಿಡತೊಡಗಿದಳು.

ಮಲ್ಲೇಶ್ ಮಾಸ್ತರರು ಬರೆದುಕೊಟ್ಟಿದ್ದ ಪಿಂಚಣಿಯ ಅರ್ಜಿಯನ್ನು ಟ್ರಂಕ್ ಒಂದರಲ್ಲಿ ಭದ್ರವಾಗಿ ಇಟ್ಟಿದ್ದಳು ಸಾವಕ್ಕ. ಮಂತ್ರಿಗಳು ತನ್ನ ಮನೆಗೆ ಬಂದಾಗ ಅವರ ಕೈಗೆ ಅದನ್ನು ತಲುಪಿಸಿ ಸೆರಗೊಡ್ಡಿ ಬೇಡಿಕೊಳ್ಳಬೇಕೆಂದುಕೊಂಡಳು. ತನ್ನ ಬೇಡಿಕೆಯನ್ನು ಮನ್ನಿಸಿ ಅವರು ನಿಂತ ಕಾಲ ಮೇಲೆಯೇ ಪಿಂಚಣಿಯನ್ನು ಮಾಡಿಸಿಕೊಟ್ಟ ಹಾಗೆ ಕನಸ ಕಾಣಹತ್ತಿದಳು.

ಅಂದು ಹಳ್ಳಿಗೆ ಹಳ್ಳಿಯೇ ಮದುಮಗಳಂತೆ ಸಿಂಗಾರಗೊಂಡಿತ್ತು. ಓಣಿ ಓಣಿಗೂ ತಳಿರು ತೋರಣಗಳು ತೂಗಾಡುತ್ತಿದ್ದವು. ಅಲ್ಲಲ್ಲಿ ಮಂತ್ರಿಗಳ ಕಟೌಟ್‌ಗಳು ರಾರಾಜಿಸುತ್ತಿದ್ದವು. ಪಂಚಾಯ್ತಿಯವರೂ ಯುವಕರೂ ಪುರುಸೊತ್ತಿಲ್ಲದಂತೆ ಓಡಾಡುತ್ತಿದ್ದರು. ಬೆಳಗಿನಿಂದಲೇ ಟಿ.ವಿ. ಚಾನಲ್‌ನ ಮಂದಿ ಅಲ್ಲಲ್ಲಿ ಠಿಕಾಣಿ ಹೂಡಿದ್ದರು. ಕೂದಲನ್ನು ಇಳಿಬಿಟ್ಟುಕೊಂಡಿದ್ದ ಹುಡುಗಿಯೊಬ್ಬಳು ಸಾವಕ್ಕನ ಮುಂದೆ ಮೈಕ್ ಹಿಡಿದು, "ಅಜ್ಜೀ, ನಿಮ್ಮ ಮನೆಗೆ ಮಂತ್ರಿಗಳು ಬರುತ್ತಿದ್ದಾರೆ. ನಿಮಗೇನನ್ನಿಸುತ್ತಿದೆ" ಎಂದಾಗ ಸಾವಕ್ಕಾ ಮದುಮಗಳಂತೆ ನಾಚುತ್ತ, "ಭಾಳ ಸಂತೋಸ ಆಗೇತರಿ" ಎಂದಿದ್ದಳು. ಸಂಜೆ ಏಳು ಗಂಟೆಯ ಸುಮಾರಿಗೆ ಮಂತ್ರಿಗಳು ಪಂಚಾಯ್ತಿಯ ಬಾಗಿಲಿಗೆ ಬಂದಿಳಿದರು. ಅವರು ಸೀದಾ ತನ್ನ ಮನೆಗೇ ಬರುವರೆಂದುಕೊಂಡಿದ್ದ ಸಾವಕ್ಕಳಿಗೆ ಪಿಚ್ಚೆನಿಸಿತು. ಯುವಕನೊಬ್ಬನನ್ನು ಕೇಳಿದಾಗ ಪಂಚಾಯ್ತಿ ಮುಂದೆ ಹಾಕಿದ್ದ ಪೆಂಡಾಲಿನಲ್ಲಿ ಭಾಷಣ ಮುಗಿಸಿ ಇಲ್ಲಿಗೆ ಬರುತ್ತಾರೆ ಎಂದಿದ್ದ.

ಭಾಷಣದ ಕಾರ್ಯಕ್ರಮವನ್ನು ಮುಗಿಸಿ ಮಂತ್ರಿಗಳು ನಾಲ್ಕಾರು ಹಿಂಬಾಲಕರೊಂದಿಗೆ ಸಾವಕ್ಕನ ಮನೆಗೆ ಬಂದಿದ್ದರು. ಯಾರೋ ಇಬ್ಬರು ಹೆಣ್ಣು ಮಕ್ಕಳು ಆರತಿ ಬೆಳಗಿ ಮಂತ್ರಿಗಳನ್ನು ಬರಮಾಡಿಕೊಂಡಿದ್ದರು. ತಾನು ನಾಲ್ಕು ಮಂದಿಗಾಗುವಷ್ಟು ಅಡುಗೆ ಮಾಡಿದ್ದು. ಬಂದವರು ಏಳೆಂಟು ಜನ. ಅಡುಗೆ ಸಾಲದಾದರೆ ಏನು ಮಾಡುವುದೆಂದು ಚಡಪಡಿಸತೊಡಗಿದಳು. ಮಂತ್ರಿಗಳು ತನ್ನ ಬಗ್ಗೆ ಏನೆಂದುಕೊಂಡಾರೆಂದು ಯೋಚನೆಯಲ್ಲಿ ಮೈಮರೆತು ಬಿಟ್ಟಳು ಸಾವಕ್ಕ. ಮರಿಬಸಪ್ಪನವರು, "ಬೇ ಸಾವಕ್ಕಾ" ಎಂದಾಗ ಎಚ್ಚರಗೊಂಡಿದ್ದಳು. ''ಇವಳೇ ಸಾವಕ್ಕ ಸರ್, ಈ ಮನೆಯ ಯಜಮಾನಿ'' ಎಂದು ಸಾವಕ್ಕನನ್ನು ಮಂತ್ರಿಗಳಿಗೆ ಪರಿಚಯಿಸಿದ್ದರು. ಮಂತ್ರದ ಗೊಂಬೆಯಂತೆ ನಿಂತಿದ್ದ ಸಾವಕ್ಕಳಿಗೆ, "ಸಾಹೇಬ್ರಿಗೆ ನಮಸ್ಕಾರ ಮಾಡಬೇ'' ಎಂದಾಗ ಭಕ್ತಿಯಿಂದ ಕೈ ಮುಗಿದಿದ್ದಳು ಸಾವಕ್ಕ. ಸಾಕಷ್ಟು ದಣಿದಿದ್ದ ಮಂತ್ರಿಗಳನ್ನು ಅಲ್ಲಿದ್ದವರು ಊಟಕ್ಕೆ ಎಬ್ಬಿಸಿದರು. ಅಷ್ಟರಲ್ಲಿಯೇ ನಾಲ್ಕಾರು ಯುವಕರು ಕಾರೊಂದರಲ್ಲಿ ಬಂದ ಊಟ, ಹಾಸುಗೆಯನ್ನು ತಂದು ಒಳಗಿಡತೊಡಗಿದರು. ಯಾರೋ ಒಬ್ಬರು ಸಾವಕ್ಕಳನ್ನು ಕರೆದು ಊಟಕ್ಕೆ ಕುಳಿತ ಮಂತ್ರಿಗಳ ತಟ್ಟೆಗೆ ಅನ್ನವನ್ನು ಬಡಿಸುತ್ತಿರುವಂತೆ ಪೋಸು ಕೊಡಲು ಹೇಳಿದರು. ಸಾವಕ್ಕ ಸೂತ್ರದ ಗೊಂಬೆಯಂತೆ ಅವರು ಹೇಳಿದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರೆ, ಕ್ಯಾಮೆರಾಗಳು ಚಕ ಚಕ ಎಂದು ಸವಂಡು